# ಕೆ.ಟಿ.ಗಟ್ಟಿ



ಉತ್ತಮ ಭಾಷೆ, ಆಕರ್ಷಕ ಶೈಲಿ, ಹೊಸ ಹೊಸ ವಸ್ತು, ಸರಳ ನಿರೂಪಣೆಗಳ ಮೂಲಕ ಕನ್ನಡ ಸಾರಸ್ವತ ಲೋಕದಲ್ಲಿ ಮನೆ ಮಾತಾದ ಹಿರಿಯ ಕಥೆಗಾರ ಕೆ.ಟಿ. ಗಟ್ಟಿ ಅವರು ಎಲ್ಲ ಓದುಗರಿಗೆ ಚಿರಪರಿಚಿತರು. ಕೇರಳ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಬಿಎಡ್ ಪದವಿ ಪಡೆದಿರುವ ಕೆ.ಟಿ.ಗಟ್ಟಿ ದಕ್ಷಿಣ ಕನ್ನಡ ಜಿಲ್ಲೆ ಉಜಿರೆಯವರು. ಜನಿಸಿದ್ದು 1938ರಲ್ಲಿ. ಸದ್ಯ ಮಂಗಳೂರಿನಲ್ಲಿ ನೆಲೆಸಿದ್ದಾರೆ.

ತಮ್ಮ ಹದಿನೇಳರ ಹರೆಯದಲ್ಲಿಯೇ (1955) ಶಿಕ್ಷಕರಾಗಿ ಕೆಲಸಕ್ಕೆ ಸೇರಿದ ಇವರು ಇಥಿಯೋಪಿಯಾದಲ್ಲಿ ಒಂಬತ್ತು ವರ್ಷ ಸೇರಿದಂತೆ ಒಟ್ಟು 25 ವರ್ಷ ಇಂಗ್ಲಿಷ್ ಪ್ರಾಧ್ಯಾಪಕರಾಗಿ ದುಡಿದವರು. 1957ರಿಂದ ಲೇಖನಿ ಹಿಡಿದು ಸಾಹಿತ್ಯ ಕೃಷಿ ಆರಂಭಿಸಿದ ಈ ಹಿರಿಯ ಕಥೆಗಾರ ನಿರಂತರವಾಗಿ ಕಥೆ, ಕಾದಂಬರಿ, ಕವನ, ಪ್ರಬಂಧ ಸಂಕಲನ, ನಾಟಕಗಳನ್ನು ಬರೆಯುತ್ತಲೇ ಬಂದರು. ಇವರ ಮೊದಲ ಕಾದಂಬರಿ 'ಶಬ್ದಗಳು' 1973ರಲ್ಲಿ ಪ್ರಕಟವಾಯಿತು. ಈವರೆಗೆ 48 ಕಾದಂಬರಿಗಳು, 5 ಕಥಾ ಸಂಕಲನಗಳು, 6 ಪ್ರಬಂಧ ಸಂಕಲನಗಳು, 22 ನಾಟಕಗಳು, 14 ಬಾನುಲಿ ನಾಟಕಗಳು, 2 ಕವನ ಸಂಕಲನಗಳಲ್ಲದೆ ಆತ್ಮಕಥೆ, ವ್ಯಕ್ತಿಚಿತ್ರ ಹಾಗೂ ಪ್ರವಾಸ ಕಥನಗಳನ್ನೂ ಬರೆದು ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಹೆಗ್ಗಳಿಕೆ ಇವರದು.

ತುಳು ಭಾಷೆಯಲ್ಲೂ ಒಂದು ಕವನ ಸಂಕಲನ ಹಾಗೂ ಕಾದಂಬರಿ ಪ್ರಕಟಿಸಿದ್ದಾರೆ. ಕೆ.ಟಿ. ಗಟ್ಟಿಯವರು ರಚಿಸಿದ 30 ಮಕ್ಕಳ ನಾಟಕಗಳು ಕನ್ನಡ ಅಂತರ್ಜಾಲ ಮ್ಯಾಗಜಿನ್‌ನಲ್ಲಿ ಪ್ರಕಟಗೊಂಡಿವೆ. ಇತರ 10 ಮಕ್ಕಳ ನಾಟಕಗಳು ಪುಸ್ತಕ ರೂಪದಲ್ಲಿ ಹೊರಬಂದಿವೆ. ಮಂಗಳೂರು ಆಕಾಶವಾಣಿಯಲ್ಲಿ ಹಲವು ಭಾಷಣಗಳು, 50 ಚಿಂತನಗಳು, ಕಥೆಗಳು ಪ್ರಸಾರವಾಗಿವೆ. ಕಳೆದ 40 ವರ್ಷಗಳಿಂದ ನಾಡಿನ ಹೆಸರಾಂತ ದಿನಪತ್ರಿಕೆಗಳು, ವಾರ ಹಾಗೂ ಮಾಸಪತ್ರಿಕೆಗಳಲ್ಲಿ ಇವರ ಹಲವಾರು ಲೇಖನಗಳು, ಕವನಗಳು ಪ್ರಕಟವಾಗಿವೆ. ಹೆಸರಿಗೆ ತಕ್ಕಂತೆ ಸಾಹಿತ್ಯ ಕ್ಷೇತ್ರದಲ್ಲಿ 'ಗಟ್ಟಿ ಕುಳ' ಎನಿಸಿರುವ ಕೆ.ಟಿ.ಗಟ್ಟಿ ಅವರ ಒಟ್ಟು 16 ಕಾದಂಬರಿಗಳು 'ಸುಧಾ' ವಾರಪತ್ರಿಕೆ ಒಂದರಲ್ಲೇ ಪ್ರಕಟವಾಗಿವೆ.

'ಮೋಹಚುಂಬಿತ ಮಾಯೆ' ಇವರು 'ಸುಧಾ' ವಾರಪತ್ರಿಕೆಗಾಗಿಯೇ ಬರೆದ ಹೊಸ ಹಾಗೂ ವಿಭಿನ್ನ ವಸ್ತುವನ್ನು ಒಳಗೊಂಡ ಕಾದಂಬರಿ.

ಅಮೆರಿಕೆಯಿಂದ ನರಹರಿ ಭಾರತಕ್ಕೆ ಬಂದ ಬಗ್ಗೆ ಏನೇನೋ ಕತೆಗಳನ್ನು ಜನರು ಹೆಣೆದಿದ್ದರು. ಅದೆಲ್ಲವನ್ನೂ ಕ್ರೋಢೀಕರಿಸಿದರೆ ಅದು ಒಂದು ಬೃಹತ್ ಕಾದಂಬರಿಯೇ ಆಗಬಹುದಿತ್ತು. ಇಷ್ಟೆಲ್ಲ ಕಟ್ಟು ಕತೆಗಳ ನಡುವೆ ನರಹರಿಯ ಬಗ್ಗೆ ಒಂದೇ ಒಂದು ಸತ್ಯ ಕತೆಯೂ ಇದ್ದು ಆತ ಎಂಥ ಮನುಷ್ಯ ಎಂಬುದನ್ನು ಸಾರುವ ಸರ್ಟಿಫಿಕೇಟಾಗಿ ಜನಜನಿತವಾಯಿತು.

2

ಅದೇನೆಂದರೆ, ಒಂದು ದಿನ, ನರಹರಿ ಸಕಲೇಶಪುರದಲ್ಲಿದ್ದ ಏಕಮಾತ್ರ 'ಸುಪರ್ ಮಾರ್ಕೆಟ್' ಎಂಬ ಅಂಗಡಿಯಲ್ಲಿ ಸಾಮಾನು ಕೊಳ್ಳುವಾಗ ತನಗೆ ಬೇಕಾದುದನ್ನು ಆಯ್ದು ಪ್ಲಾಸ್ಟಿಕ್ ತೊಟ್ಟೆಗೆ ಹಾಕಿ ಗಣಕಯಂತ್ರಾಚಾರ್ಯನ ಮುಂದಿರಿಸಿದಾಗ, ಪ್ಲಾಸ್ಟಿಕ್ ತೊಟ್ಟೆಗೆ ಹಾಕುವ ಬದಲು ತಪ್ಪಿ ಒಂದು ಮೊಸರು ತೊಟ್ಟೆಯನ್ನು ತನ್ನ ಕೈಯಲ್ಲಿದ್ದ ಬಟ್ಟೆಯ ಚೀಲದಲ್ಲಿ ಹಾಕಿದ್ದ. ಅದನ್ನು ಕಂಡ ಗಣಕಯಂತ್ರಾಚಾರ್ಯ, 'ಏನ್ರಿ ಅದು ನಿಮ್ಮ ಚೀಲದಲ್ಲಿ? ಅದನ್ನು ತೆಗೆದು ಈಚೆ ಇಡಿ' ಎಂದು ತುಸು ಒರಟಾಗಿ ಹೇಳಿದ. 'ತಪ್ಪಾಗಿದೆ ಕ್ಷಮಿಸಿ' ಎಂದು ನರಹರಿ ಮೊಸರು ಪೊಟ್ಟಣವನ್ನು ಗಣಕಾಚಾರ್ಯನ ಮುಂದಿಟ್ಟು, 'ಕ್ಷಮಿಸಿ. ಈ ತಪ್ಪಿಗೆ ದಂಡ ವಿಧಿಸಬೇಕು. ದಯವಿಟ್ಟು ಎರಡು ತೊಟ್ಟೆಯ ಹಣ ತೆಗೆದುಕೊಳ್ಳಿ' ಎಂದ. ಅಲ್ಲೇ ಹತ್ತಿರ ನಿಂತಿದ್ದ ಒಬ್ಬ ಗಿರಾಕಿ, 'ಮೊಸರು ಕಳ್ಳ' ಎಂದು ಗೊಣಗಿದ.

'ಪರವಾಗಿಲ್ಲ. ಒಂದೇ ತೊಟ್ಟೆಯ ಹಣ ಕೊಡಿ' ಎಂದ ಗಣಕಾಚಾರ್ಯ.

ಆದರೆ ನರಹರಿ, 'ನನ್ನ ತಪ್ಪಿಗೆ ನಾನು ದಂಡ ತೆರಲೇಬೇಕು. ಎರಡು ತೊಟ್ಟೆಯ ಹಣ ತೆಗೆದುಕೊಳ್ಳಿ' ಎಂದ. ಆದರೆ ಹಣ ತೆಗೆದುಕೊಳ್ಳಲು ಗಣಕಾಚಾರ್ಯ ಒಪ್ಪದಿದ್ದಾಗ ನರಹರಿ, 'ನೀವು ಹಣ ತೆಗೆದುಕೊಳ್ಳಲೇ ಬೇಕು ಎಂದು ಒತ್ತಾಯಿಸಿದ.

ಮಾರ್ಕೆಟಿನಲ್ಲಿ ನಿಜವಾಗಿ ನಡೆದದ್ದು ಏನು ಎಂದು ಅರಿತುಕೊಂಡ ಸ್ವಚ್ಛ ಮನಸ್ಸಿನ ಮಂದಿ ನರಹರಿಯ ಬಗ್ಗೆ, 'ಅಷ್ಟು ಒಳ್ಳೆಯ ಗುಣವಂತರು ಈಗ ಅಪರೂಪ' ಎಂದು ಹೇಳತೊಡಗಿದರು. ಆ ದಿನ ಸುಪರ್ ಮಾರ್ಕೆಟಿನಲ್ಲಿ ನರಹರಿ ಆಡಿದ ಮೂರ್ನಾಲ್ಕು ವಾಕ್ಯಗಳನ್ನು ಕೇಳಿಸಿಕೊಂಡ ಮಂದಿಯಿಂದಾಗಿ, ನರಹರಿಗೆ ಕನ್ನಡ ಬರುತ್ತದೆ ಎಂಬ ಮಾತು ಕೂಡ ಜನರ ನಾಲಿಗೆಗೆ ಬಂತು. ಆದರೆ ತಮ್ಮ ಪ್ರೀತಿ ಆದರವನ್ನು ವ್ಯಕ್ತಪಡಿಸುವ ಧೈರ್ಯ ಯಾರಿಗೂ ಇರಲಿಲ್ಲ. ಎಂಬ ಲೆಕ್ಕ ಯಾರಿಗೂ ಸಿಗಲಿಲ್ಲ. ಆತ ಭಾರತಕ್ಕೆ ಬಂದ ನಂತರದ ಹದಿನೈದು ವರ್ಷಗಳಲ್ಲಿ ಒಟ್ಟು ಐದು ವಾಕ್ಯಗಳನ್ನು ಮಾತ್ರ ಆಡಿದ್ದಾನೆ ಎಂದು ಒಬ್ಬನೆಂದರೆ, ಆತ ಮಾತೇ ಆಡಿಲ್ಲ ಎಂದು ಇನ್ನೊಬ್ಬ ಹೇಳುತ್ತಿದ್ದ. ಮಾತೇ ಆಡದೆ, ಆನೆ, ಕುದುರೆ, ಕುರಿ, ಆಡು ಹಸು ಮುಂತಾವುಗಳಂತೆ ಬದುಕಲು ಸಾಧ್ಯ ಎಂಬುದಕ್ಕೆ ಇರುವ ಒಂದೇ ಒಂದು ಉದಾಹರಣೆಯೆಂದರೆ ಈ ನರಹರಿ ಎಂದು ಕೆಲವರು ಹೇಳುತ್ತಿದರು. ಒಂದರ್ಥದಲ್ಲಿ ನರಹರಿ ಸಮಾಜ ಎಂಬ ಗವಿಯ ಒಳಗೆ ಅರೆಯೆಚ್ಚರದ ಅನಂತ ಧ್ಯಾನದಲ್ಲಿ ಮಗ್ನನಾದ ಯೋಗಿಯಂತೆ ಇದ್ದ. ಅವನಿಗೆ ಮಾತಿನ ಅಗತ್ಯವೇ ಇರಲಿಲ್ಲ. ವಾಸ್ತವದಲ್ಲಿ, ತೀರಾ ಅನಿವಾರ್ಯವಾದ ಬದುಕಿನ ವ್ಯವಹಾರಕ್ಕೆ ತಕ್ಕಷ್ಟು ಅವನು ಮಾತಾಡುತ್ತಿದ್ದ. ಸಂವಾದವೆಂಬುದು ಮಾತ್ರ ಎಂದೂ ಇರಲಿಲ್ಲ.

3

ಮಹಾರಾಷ್ಟ್ರದ ನಾಗಪುರದಲ್ಲಿ ಹುಟ್ಟಿ ಅಲ್ಲೇ ಬೆಳೆದು ದೊಡ್ಡವನಾದ ಕನ್ನಡಿಗ ನರಹರಿ ಪುಣೆಯಲ್ಲಿ ಖಗೋಲ ವಿಜ್ಞಾನದಲ್ಲಿ ಎಂಎಸ್ಸಿವರೆಗೆ ಓದಿ ಮೂವತ್ತನೇ ವರ್ಷಕ್ಕೇ ಅಮೆರಿಕೆಗೆ ಹೋಗಿ, ಪಿಎಚ್‌ಡಿ ಪದವಿ ಗಳಿಸಿ ನಾಸಾದಲ್ಲಿ ಉದ್ಯೋಗ ಪಡೆದ. ನರಹರಿಯ ತಂದೆ ಹರಿಹರ ಪೋರ್ಸಲೇನ್ ಸ್ಟೈನ್ಲೆಸ್ ಪಾತ್ರೆಗಳ ವ್ಯಾಪಾರದಲ್ಲಿ ಒಳ್ಳೆಯ ಸಂಪಾದನೆ ಮಾಡಿದ್ದರಿಂದ ನರಹರಿಯ ಓದಿಗೆ ಬೇಕಾದಷ್ಟು ಹಣ ಒದಗಿಸಿದ್ದ.

ನಾಸಾದಲ್ಲಿ ಉದ್ಯೋಗ ಪಡೆದುಕೊಂಡ ಮರುವರ್ಷವೇ ಮದುವೆಯಾಗುವ ಉದ್ದೇಶದಿಂದ ನರಹರಿ ಭಾರತಕ್ಕೆ ಬಂದ. ಮಗನ ಸಾಧನೆಯಿಂದ ತಂದೆ ಹರಿಹರ ಮತ್ತು ತಾಯಿ ಗೌರಿಗಾದ ಹಿಗ್ಗು ಮಾತಿಗೆ ಸಿಗದಷ್ಟು. ಮಗ ಪಿಎಚ್‌ಡಿ ಪಡೆದು ಬಂದರೆ ಮಗನ ಜೊತೆ ಮಂತ್ರಾಲಯಕ್ಕೆ ಹೋಗುವ ತೀರ್ಮಾನ ಮಾಡಿದ್ದರು. ಭಾರತದಲ್ಲಿ ಕನಿಷ್ಠ ಒಂದು ವರ್ಷ